**<u>ಸಾಕ್ಷಿಯನ್ನು ದಿನಾಂಕ 24.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎ.ಬಿ. ವಕೀಲರಿಂದಃ</u>**

1. ನಾನು ನಿವೃತ್ತ ವಿ.ಐ.ಎಸ್.ಎಲ್ ನೌಕರ. ಈಗ ನಾನು ಬೇರೆ ಕೆಲಸ ಮಾಡುತ್ತಿಲ್ಲ. ನನ್ನ ವಾದ ಪತ್ರದಲ್ಲಿ ನಾನು ನಿವೃತ್ತ ನೌಕರ ಎಂದೇ ಬರೆಸಿದ್ದೇನೆ. ಆ ರೀತಿ ಬರೆಸಿಲ್ಲ ಎಂದರೆ ಸರಿಯಲ್ಲ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ಈ ದಾವೆಯ ಪ್ರತಿವಾದಿಯನ್ನು ಹೊರತು ಪಡಿಸಿ ನಾನು ಇತರೆ 3 ಜನರ ವಿರುದ್ಧ ಹಣ ವಸೂಲಾತಿಗಾಗಿ ದಾವೆ ಸಲ್ಲಿಸಿದ್ದೇನೆ. ಎಲ್ಲರಿಗೂ ನಾನು ವಿಶ್ವಾಸದ ಮೇರೆಗೆ ಸಾಲ ಕೊಟ್ಟಿದ್ದೇನೆ, ಬಡ್ಡಿಗೆ ಕೊಟ್ಟಿಲ್ಲ . ನಾನು ದಾವೆ ಹಾಕಿರುವ ಎಲ್ಲರೂ ನನಗೆ ಬರೆದುಕೊಟ್ಟಿರುವ ಪ್ರನೋಟಿನಲ್ಲಿ ಬಡ್ಡಿ ಮೊತ್ತವನ್ನು ನಮೂದಿಸಲಾಗಿದೆ. ಸಾಕ್ಷಿ ಪುನಃ ಹಣ ತಿರುವಳಿಗೆ ಕೊಟ್ಟ ಚೆಕ್ನಲ್ಲಿ ಬಡ್ಡಿ ನಮೂದು ಇಲ್ಲ ಎನ್ನುತ್ತಾರೆ. ಪ್ರನೋಟು ಆಧಾರದ ಮೇಲೆ ಈ ದಾವೆಯನ್ನು ಹೊರತು ಪಡಿಸಿ ಇನ್ನೂ 3 ದಾವೆ ಸಲ್ಲಿಸಿದ್ದೇನೆ. ಎಲ್ಲಾ 4 ದಾವೆಗಳ ಪ್ರನೋಟುಗಳಲ್ಲಿ ಬಡ್ಡಿ ನಮೂದಾಗಿದೆ.

2. ಒಟ್ಟು ಎಷ್ಟು ಜನರಿಂದ ಪ್ರನೋಟು ಪಡೆದು ಸಾಲ ಕೊಟ್ಟಿದ್ದೇನೆ ಮತ್ತು ಎಷ್ಟು ಜನರಿಂದ ಚೆಕ್ ಪಡೆದುಕೊಂಡು ಸಾಲ ಕೊಟ್ಟಿದ್ದೇನೆ ಎಂದು ನೆನಪಿಲ್ಲ. ಯಾವ ಯಾವ ಇಸವಿಯಲ್ಲಿ ಯಾರ ಯಾರಿಗೆ ಪ್ರನೋಟು ಮೂಲಕ ಮತ್ತು ಚೆಕ್ ಮೂಲಕ ಸಾಲ ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ನನ್ನಿಂದ ಸಾಲ ಪಡೆದ ಎಲ್ಲರ ಬಳಿಯೂ ನಾನು ಭದ್ರತೆಗಾಗಿ

ಪ್ರನೋಟು ಅಥವಾ ಚೆಕ್ ಪಡೆಯುತ್ತೇನೆ ಎಂದರೆ ಸರಿ . ಪ್ರಾಮಾಣಿಕವಾಗಿ ಬಡ್ಡಿ ಮತ್ತು ಅಸಲು ಪಾವತಿ ಮಾಡಲಿ ಎಂಬ ಉದ್ದೇಶದಿಂದ ಪ್ರನೋಟು ಮತ್ತು ಚೆಕ್ ಪಡೆಯುತ್ತೇನೆ ಎಂದರೆ ಸರಿ. ಚೆಕ್ ಮತ್ತು ಪ್ರನೋಟುಗಳ ಆಧಾರದ ಮೇರೆಗೆ ಇಲ್ಲಿಯವರೆಗೆ ಸುಮಾರು 20 ರಿಂದ 25 ಹಣ ವಸೂಲಾತಿ ದಾವೆಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದೇನೆ ಎಂದರೆ ಸುಳ್ಳು.

3. ಅ.ದಾವೆ.392/2022 ರಂತೆ ಅಫ್ರೋಜ್ ಸಾಬ್ ಎಂಬುವರಿಗೆ ದಿಃ 22.04.2021 ರಂದು ಕೊಟ್ಟ 4 ಲಕ್ಷ ಹಣ ವಸೂಲಾತಿಗೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಅ.ದಾವೆ.106/2023 ರಂತೆ ಮೆಹಬೂಬ್ ಆಲಿ ಎಂಬುವರಿಗೆ ದಿಃ 18.06.2021 ರಂದು ಕೊಟ್ಟ 2.5 ಲಕ್ಷ ಹಣ ವಸೂಲಾತಿಗೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಸಿ.ಸಿ. 4371/2022 ರಂತೆ ಪುಟ್ಟಮ್ಮ ಎಂಬುವರಿಗೆ ದಿಃ 30.05.2021 ರಂದು ಕೊಟ್ಟ 6 ಲಕ್ಷ ಹಣ ವಸೂಲಾತಿಗೆ ಚೆಕ್ ಬೌನ್ಸ್ ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿ. ಸಿ.ಸಿ. 4306/2022 ರಂತೆ ಕುಮಾರ ಎಂಬುವರಿಗೆ ದಿಃ 24.04.2021 ರಂದು ಕೊಟ್ಟ 4.5 ಲಕ್ಷ ಹಣ ವಸೂಲಾತಿಗೆ ಚೆಕ್ ಬೌನ್ಸ್ ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿ. ಅಷ್ಟೇ ಅಲ್ಲದೇ ಹುಸೇನ್ ಸಾಬ್ , ಜಬೀವುಲ್ಲಾ ,ಲಕ್ಷ್ಮಮ್ಮ , ಸ್ವಾಮಿ ಮತ್ತು ಬಸವರಾಜರವರಿಗೆ 2021 ರಲ್ಲಿ ಸಾಲ ಕೊಟ್ಟಿದ್ದು ಅದರ ವಸೂಲಾತಿಗಾಗಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸಾಕ್ಷಿ ಬಸವರಾಜ ಮತ್ತು ಲಕ್ಷ್ಮಮ್ಮರವರನ್ನು ಹೊರತು ಪಡಿಸಿ ಉಳಿದವರ ವಿರುದ್ಧ ದಾವೆ ಹಾಕಿದ್ದೇನೆ ಎನ್ನುತ್ತಾರೆ.

4. ಮೇಲೆ ಹೆಸರಿಸಿದ ಎಲ್ಲಾ ವ್ಯಕ್ತಿಗಳಿಗೂ ಬಡ್ಡಿಗಾಗಿ ಸಾಲ ಕೊಟ್ಟಿದ್ದೆ ಎಂದರೆ ಸರಿ. ಸಾಕ್ಷಿ ಪುನಃ ಯಾರೂ ಬಡ್ಡಿ ಕೊಟ್ಟಿಲ್ಲ ಎನ್ನುತ್ತಾರೆ. ಲೇವಾದೇವಿ ವ್ಯವಹಾರ ಮಾಡುವ ಸಲುವಾಗಿ ನಾನು ಸರ್ಕಾರದಿಂದ ಪರವಾನಗೆ ಪಡೆದಿಲ್ಲ. ಸಾಕ್ಷಿ ಪುನಃ ಬಡ್ಡಿ ವ್ಯವಹಾರ ಮಾಡಿಲ್ಲ ಎನ್ನುತ್ತಾರೆ. ಬಡ್ಡಿ ವ್ಯವಹಾರ ಪಡೆಯಲು ಕಾನೂನು ಪ್ರಕಾರ ಬಡ್ಡಿ ವ್ಯವಹಾರ ಪಡೆಯಬೇಕು ಎನ್ನುವುದು ನನಗೆ ಗೊತ್ತಿಲ್ಲ. ಪರವಾನಗೆ ಪಡೆಯದೇ ಸಾರ್ವಜನಿಕರ ಬಳಿ ಲೇವಾದೇವಿ ವ್ಯವಹಾರ ಮೋಸ ಮಾಡುತ್ತಿದ್ದೇನೆ ಎನ್ನುವುದು ಸುಳ್ಳು . ಪ್ರತಿವಾದಿಯ ಸಹಿಯನ್ನು ಸೃಷ್ಟಿ ಮಾಡಿಕೊಂಡು ಪ್ರನೋಟು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

5. ಪ್ರತಿವಾದಿಗೆ ದಿಃ 22.03.2021 ರಂದು 4 ಲಕ್ಷ ಸಾಲ ಕೊಟ್ಟಿದ್ದೆ. ಸದರಿ ದಿನ ಪ್ರತಿವಾದಿಗೆ ನಾನು 4 ಲಕ್ಷ ಸಾಲ ಕೊಟ್ಟೇ ಇಲ್ಲ ಎಂಬುದು ಸರಿಯಲ್ಲ. ನಿಪಿ-1 ಮತ್ತು 2 ರ ದಾಖಲೆಗೂ ಒಬ್ಬ ಸಾಕ್ಷಿದಾರ ಮಾತ್ರ ಸಹಿ ಹಾಕಿದ್ದಾರೆ. ಸದರಿ ಸಾಕ್ಷಿದಾರರ ಹೆಸರು ಕೆಂಪಯ್ಯ. ಸದರಿ ಸಾಕ್ಷಿಯ ತಂದೆಯ ಹೆಸರು, ಇತರೆ ವಿವರ ಮತ್ತು ವಿಳಾಸ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಕೆಂಪಯ್ಯ ಯಾರು ಎಂಬ ಪ್ರಶ್ನೆಗೆ ಸಾಕ್ಷಿ ಅವರು ವಿ.ಐ.ಎಸ್.ಎಲ್ ನನ್ನ ಸಹುದ್ಯೋಗಿಯಾಗಿದ್ದರು. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಅವರಿಗೆ ಸಂಬಂಧಪಟ್ಟ ದಾಖಲೆಗಳು ನನ್ನ ಬಳಿ ಇಲ್ಲ. ಅವರು ಈಗ ಬದುಕಿದ್ದಾರೆ. ಅವರು ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡಿದ್ದಾರೆ. ನಾನು ಸಹ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುತ್ತೇನೆ.

6. ಸಾಕ್ಷಿಗೆ ವಾದ ಪತ್ರದಲ್ಲಿರುವ ಅವರ ಸಹಿಯನ್ನು ತೋರಿಸಲಾಯಿತು. ಅದನ್ನು ನೋಡಿದ ಸಾಕ್ಷಿ ಸದರಿ ಸಹಿ ತನ್ನದೇ ಎನ್ನುತ್ತಾರೆ. ಸಾಕ್ಷಿಗೆ ನಿಪಿ-1 ಮತ್ತು 2 ರ ದಾಖಲೆಯನ್ನು ತೋರಿಸಲಾಯಿತು. ಅದರಲ್ಲಿ ಕೆಂಪಯ್ಯ ಎಂದು ಇರುವ ಸಹಿಗಳು ನನ್ನದಲ್ಲ , ಸಾಕ್ಷಿ ಕೆಂಪಯ್ಯರದ್ದು ಎನ್ನುತ್ತಾರೆ. ನಿಪಿ-1 ಮತ್ತು 2 ರ ದಾಖಲೆಯಲ್ಲಿರುವ ಸಹಿಗಳು ನನ್ನದೇ ಎಂದರೆ ಸುಳ್ಳು. ಕೆಂಪಯ್ಯ ಎಂಬ ಕಾಲ್ಪನಿಕ ವ್ಯಕ್ತಿಯ ಸಹಿಯನ್ನು ನಾನೇ ನಿಪಿ-1 ಮತ್ತು 2 ರ ದಾಖಲೆಯಲ್ಲಿ ಮಾಡಿ ಸದರಿ ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

7. ನಿಪಿ-1 ಮತ್ತು 2 ರ ದಾಖಲೆಯನ್ನು ರಾಘವೇಂದ್ರ ಎಂಬುವರು ಬರೆದಿದ್ದಾರೆ ಅವರ ಹೆಸರು ಮತ್ತು ವಿಳಾಸವನ್ನು ಸದರಿ ದಾಖಲೆಯಲ್ಲಿ ನಮೂದು ಮಾಡಿಲ್ಲ.

8. ನಾನು ಇಲ್ಲಿಯವರೆಗೆ ಪ್ರನೋಟು ಮತ್ತು ಚೆಕ್ಕಳ ಸಂಬಂಧ ಹಣ ವಸೂಸಲಾತಿಗಾಗಿ ಸಲ್ಲಿಸಿದ್ದ ದಾವೆ ಮತ್ತು ಪ್ರಕರಣಗಳ ಪ್ರತಿವಾದಿ ಹಾಗೂ ಆರೋಪಿತರ ಮಾಹಿತಿ ಇದೆ ಎಂದರೆ ಸಾಕ್ಷಿ ಮರೆತು ಹೋಗಿದೆ ಎನ್ನುತ್ತಾರೆ. ಎಲ್ಲಾ ಪ್ರನೋಟುಗಳಲ್ಲಿ ಸಾಕ್ಷಿದಾರರ ಸಂಪೂರ್ಣ ಹೆಸರು ಮತ್ತು ವಿಳಾಸ ನಮೂದಾಗಿರುವ ಬಗ್ಗೆ ನಾನು ನೋಡಿಲ್ಲ. ಸಾಕ್ಷಿದಾರರು ಮತ್ತು ಬಿಕ್ಲಮ್ ದಾರರ ಸಂಪೂರ್ಣ ಹೆಸರು ಮತ್ತು ವಿಳಾಸ ಇಲ್ಲದ ಕಾರಣ ನಿಪಿ-1 ಮತ್ತು 2 ಅಪೂರ್ಣ ದಾಖಲೆಗಳು ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ . ಸದರಿ ದಾಖಲೆಯನ್ನು ಬಿಕ್ಲಮ್ದಾರರ ಮೂಲಕ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

9. ಪ್ರತಿವಾದಿ ನನಗೆ 20 ವರ್ಷಗಳಿಂದ ಪರಿಚಯ. ಈ ಮೊದಲು ಅವರು ನನ್ನ ಜೊತೆ ಯಾವುದೇ ವ್ಯಾಪಾರ ಅಥವಾ ವ್ಯವಹಾರ ಮಾಡಿಲ್ಲ. ಅವರಿಗೆ ಸ್ವಂತ ಮನೆ ಮತ್ತು ಜಮೀನು ಇದೆ. ಆ ಬಗ್ಗೆ ನಾನು ದಾಖಲೆ ಕೊಟ್ಟಿಲ್ಲ. ಪ್ರತಿವಾದಿಯ ಜೊತೆ ನಂಬಿಕೆ ಮೇಲೆ ವ್ಯವಹಾರ ಮಾಡಿದ್ದೇನೆ. ಎಲ್ಲರಿಗೂ ನಂಬಿಕೆ ಮೇಲೆ 4–5 ಲಕ್ಷ ಸಾಲ ಕೊಡುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿಗೂ ನಾನು 4 ಲಕ್ಷ ಸಾಲ ಯಾವತ್ತೂ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**(ರವಿಕುಮಾರ ವಿ )**
**ಪ್ರಧಾನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**